ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 02ನೇ ಮಾರ್ಚ್, 2020

ಸಕಾಲ ಸೇವೆಗಳಲ್ಲಿನ ಸಮರ್ಪಕ ಜಾರಿಯಲ್ಲಿನ ವೈಫಲ್ಯದ ಬಗ್ಗೆ

ಶ್ರೀ ಟಿ.ಎ. ಶರವಣ (ವಿಧಾನ ಸಭೆಯಿಂದ ಚುನಾಯಿತರಾದವರು) :-

74 (164) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪ್ರಸ್ತುತ ಸರ್ಕಾರದ ಎಷ್ಟು ಇಲಾಖೆಗಳಲ್ಲಿ ಸಕಾಲ ಯೋಜನೆಯು ಜಾರಿಯಲ್ಲಿದೆ ಮತ್ತು ಎಷ್ಟು ಸೇವೆಗಳನ್ನು ನೀಡುತ್ತಿದೆ; (ಇಲಾಖಾವಾರು ಮಾಹಿತಿ ನೀಡುವುದು)

(ಆ) ಸಕಾಲ ಸೇವೆಯಲ್ಲಿ ಅರ್ಜಿಗಳ ಸ್ವೀಕೃತಿ ಮತ್ತು ಅದಕ್ಕೆ ಪೂರಕವಾಗಿ ತಿರಸ್ಕøತಗೊಂಡ ಅರ್ಜಿಗಳ ಪ್ರಮಾಣ ಎಷ್ಟು ಮತ್ತು ಅತೀ ಹೆಚ್ಚು ತಿರಸ್ಕøತಗೊಂಡ ಅರ್ಜಿಗಳು ಯಾವ ಇಲಾಖೆಗೆ ಸಂಬಂಧಿಸಿದವುಗಳಾಗಿವೆ ; (ಮಾಹಿತಿ ನೀಡುವುದು)

(ಇ) ಸಕಾಲ ಅರ್ಜಿಗಳ ಅತೀ ಕಡಿಮೆ ಸ್ವೀಕೃತಿಯು ಯಾವ ಯಾವ ಇಲಾಖೆಗಳಲ್ಲಿ ಕಂಡುಬರುತ್ತದೆ ; ಇದಕ್ಕೆ ಕಾರಣಗಳೇನು ಹಾಗೂ ಇದರ ನಿವಾರಣೆಗೆ ಅನುಸರಿಸಿದ ಮಾರ್ಗೋಪಾಯಗಳೇನು ;

(ಈ) ಸಕಾಲ ಸೇವೆಯನ್ನು ಸಚಿವಾಲಯಕ್ಕೂ ವಿಸ್ತರಿಸಲು ಏಕೆ ಸಾಧ್ಯವಾಗಿಲ್ಲ ; ಸಚಿವಾಲಯದಲ್ಲಿನ ಅರ್ಜಿಗಳ ವಿಲೇವಾರಿಯು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಸಕಾಲ ಯೋಜನೆಯು ಜಾರಿಯಾಗಿ ದಶಕ ಸಮೀಪಿಸುತ್ತಿರುವಾಗ ಪರಿಣಾಮಕಾರಿಯಾಗಿ ಜಾರಿಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದನ್ನು ಹೆಚ್ಚು ಜನಸ್ನೇಹಿಯಾಗಿಸುವಲ್ಲಿ ಇರುವ ತೊಡಕುಗಳೇನು ?